ಏನ್ ಮಾಡ್ತೀರಿ, ಆಗಿನ ಕಾಲವೇ ಹಂಗಿತ್ತು. ಎಲ್ಲರಿಗೂ ಕೋಪ, ಜೊತೆಗೆ ಬಡತನ, ನಿರಾಶೆ, ಸಂಸಾರದ ಖಾರ, ಕೆಲಸದಲ್ಲಿನ ಕಾವು, ಕೊನೆಗೆ ಎಲ್ಲ ಸೇರಿ ಯಾರ್‍ಯಾರದೋ ಮೇಲಿನ ಕೋಪ ನನ್ನ ಮೇಲೆ ತೀರಿಸಿಕೊಂಡು ಬಿಟ್ಟರು. ನನ್ನ ಹತ್ತಿರ ಏನೂ ಸಿಗದಿದ್ದಕ್ಕೆ ಬಸ್ಸಿನ ಡ್ರೈವರ್ ಕಂಡಕ್ಟರ್ ಇಬ್ಬರೂ ಬಸ್ಸನ್ನ ಆಶ್ರಮದ ಮುಂದೆ ನಿಲ್ಲಿಸಿ ಒಬ್ಬೊಬ್ಬರನ್ನೇ ತಲಾಶು ಮಾಡತೊಡಗಿದರು.

ಅದೇ ಹೊತ್ತಿಗೆ ನಿಜವಾದ ಕಳ್ಳ ಡ್ರೈವರ್ ಸೀಟ್ ಪಕ್ಕ ಇರೋ ಬಾಗಿಲು ತೆಗೆದು ತಪ್ಪಿಸಿಕೊಳ್ಳಲಿಕ್ಕೆ ಪ್ರಯತ್ನ ಪಟ್ಟ. ಕೊನೆಗೆ ಯಾರೋ ಅವನನ್ನ ಹಿಡಿದರು. ನನ್ನ ಸುತ್ತ ಇದ್ದ ಜನ ಅವನನ್ನು ಹಿಡಿದು ತದುಕಿದರು. ನನಗೆ ಒಬ್ಬರೂ ಸೌಜನ್ಯಕ್ಕಾದರೂ ಕ್ಷಮೆ ಕೇಳಲಿಲ್ಲ.

ಆ ಘಟನೆ ನನ್ನ ಮನಃಸ್ಥಿತಿಯನ್ನು ಬದಲಾಯಿಸಿ ಬಿಟ್ಟಿತು. ಮೊದಲೆರಡು ದಿನ ಬೀದಿಯಲ್ಲಿ ಬೆತ್ತಲಾದ ಅವಮಾನ, ಹತಾಶೆ, ತಪ್ಪಿಲ್ಲದಿದ್ದರೂ ಅನುಭವಿಸಿದ ಶಿಕ್ಷೆ, ಹೇಳಿಕೊಳ್ಳಲಿಕ್ಕೆ ಆಗದ ಸಂಕಟ, ಸುಮಾರು ಎರಡು ದಿನ ರೂಮಿನಿಂದ ಆಚೆನೇ ಬರಲಿಲ್ಲ; ಪ್ರಾಣ ತೆಗೆದುಕೊಂಡು ಬಿಡಬೇಕು ಅನ್ನಿಸಿಬಿಟ್ಟಿತು. ತಳವೇ ಇಲ್ಲದ ಬಾವಿಯಲ್ಲಿ ನನ್ನನ್ನು ಎತ್ತಿ ಎಸೆದು ಬಿಟ್ಟಂತೆ, ಕೂಗಿ ಕೂಗಿ ಸಾಕಾಗಿ ತಳಕಪ್ಪಳಿಸಿ ತಲೆ ಛಿದ್ರವಾಗಬಾರದೇ, ಈ ಚೀರಾಟ ನಿಲ್ಲಬಾರದೇ ಅಂತ ಅನ್ನಿಸೋದು. ಅಂತರಂಗದಲ್ಲಿ ಎದ್ದ ಭಯಂಕರ ಬಿರುಗಾಳಿ ಮಳೆಗೆ ತತ್ತರಿಸಿ ಹೋಗಿದ್ದೆ. ಮತ್ತೆ ಮತ್ತೆ ಅದನ್ನೇ ಯೋಚಿಸುತಿದ್ದೆ. ಒಂದೆರಡು ದಿನಗಳ ಬಳಿಕ ಮನಸಿನ ರಾಡಿ ತಿಳಿಯಾಗಿ ಹೇಳಿಕೊಳ್ಳಲಿಕ್ಕೆ ಆಗದಂತಹ ಶಾಂತಿ, ಸುರಂಗದಲ್ಲಿ ಸಿಕ್ಕಿ ಹಾಕಿಕೊಂಡ ವ್ಯಕ್ತಿ ಬೆಳಕನ್ನು ಕಂಡ ಹಾಗೆ ಹೊಸ ಚೈತನ್ಯ, ನನ್ನ ತಪ್ಪಿಲ್ಲದ ಮೇಲೆ ನಾನೇಕೆ ಹೀಗೆ ಕೊರಗಬೇಕು, ಒಳಗಿನ ಖಿನ್ನತೆಯನ್ನ ಹೊಡೆದು ಓಡಿಸಬೇಕು ಅಂತ ನಿಶ್ಚಯ ಮಾಡಿದೆ.

ನೋಡಿ, ಈ ಯಶಸ್ಸಿನ ಗರ್ಭದಲ್ಲೇ ವೈಫಲ್ಯದ ಬೀಜ ಮೊಳೆಯುತ್ತೆ. ಹಾಗೆ ಸೋಲಿನ ಕಿಡಿಯ ಕೊನೆಯಲ್ಲೇ ಗೆಲುವಿನ ಬೆಳಕು ಅರಳೋದು. ಆಮೇಲೆ, ನನ್ನ ಶಕ್ತಿಯನ್ನೆಲ್ಲ ಓದಿನ ಕಡೆ ಹರಿಸಿದೆ. ಎಲ್‌ಎಲ್‌ಬಿ ಓದಿದೆ. ಹಳೆಯ ಗೆಳೆಯರು ರಾಜಕೀಯಕ್ಕೆ ಎಳೆದು ತಂದರು. ಈಗ ಎರಡು ಬಾರಿ ಮಂತ್ರಿ ಆಗಿದ್ದೀನಿ. ಒಂದು ಸಣ್ಣ ಘಟನೆಯಿಂದಾಗಿ ಆವತ್ತು ನಾನು ಸೋತು ಆತ್ಮಹತ್ಯೆ ಮಾಡಿಕೊಂಡು ಬಿಟ್ಟಿದ್ದರೆ ಜೀವನ ವ್ಯರ್ಥವಾಗಿ ಹೋಗುತ್ತಿತ್ತು. ಈ ಜನರ ಪ್ರೀತಿ, ಜವಾಬ್ದಾರಿ ಯಾವುದೂ ಸಾಧ್ಯವಾಗುತ್ತಿರಲಿಲ್ಲ. ಆ ಒಂದು ಘಟನೆ ನನ್ನ ಬದುಕಿನ ಬದಲಾವಣೆಯ ಬಿಂದು. ಆವತ್ತಿಂದ ಈ ವಾಚು ಸಂಗ್ರಹಿಸೊ ಹುಚ್ಚು ಅದುಹೇಗೋ ಮೆಟ್ಟಿಕೊಂಡು ಬಿಟ್ಟಿತು.

ಅಷ್ಟು ಹೊತ್ತಿಗೆ ಅಲ್ಲಿಗೆ ಬಂದ ಸುಬ್ಬು, ''ನೀವು ಇನ್ನು ತಿಂಡಿಗೆ ಬಂದಿಲ್ಲ ಅಂತ ಅಮ್ಮ ಅವರು ಇನ್ನು ತಿಂಡಿ ತೊಗೊಳ್ಳದೆ ಕಾಯ್ತಾ ಇದ್ದಾರೆ'' ಎಂದರು.

ಸಾಹೇಬರು, ''ಹ್, ಸರಿ, ನಡೀರಿ ಹೈಕಮಾಂಡು, ಹೆಂಡ್ತಿ ಇಬ್ಬರನ್ನು ಕಾಯಿಸಬಾರದು. ಹಹಹಃ ವೆಂಕಟ್ ನೀವು ಬನ್ನಿ'' ಎಂದರು.

''ನನ್ನದು ಆಯಿತು, ನೀವು ತೊಗೋಳಿ ಸರ್. ನಾನು ಇಲ್ಲೇ ಇರ್ತೀನಿ, ಸ್ವಲ್ಪ ಕೆಲಸ ಬಾಕಿ ಇದೆ'' ಎಂದರು ವೆಂಕಟ್.

ಸಾಹೇಬರು ಆ ಕಡೆ ಹೋಗುತ್ತಿದ್ದ ಹಾಗೇ, ವೆಂಕಟ್ ಅವರು ಅಷ್ಟು ಹೊತ್ತಿನಿಂದ ತಡೆದಿದ್ದ ಕಣ್ಣೀರು ಕಣ್ಣ ತುಂಬಿತು. ಅದನ್ನ ಕರವಸ್ತ್ರದಿಂದ ಒರೆಸಿಕೊಳ್ಳಲು, ಸುಬ್ಬು ಅದನ್ನ ಕಂಡು, ''ಸರ್, ಯಾಕೆ ತುಂಬಾ ಭಾವುಕರಾಗಿದ್ದೀರಿ, ನಮ್ಮ ಸಾಹೇಬರು ಅವರ ವಾಚಿನ ಕಥೆ ಹೇಳಿದ್ರಾ'' ಎಂದು ಕೇಳಿದರು. ಮೆಲ್ಲಗೆ ಧ್ವನಿ ತಗ್ಗಿಸಿ, ''ನೀವು ಒಳ್ಳೆ ಸರಿ, ಇದನೆಲ್ಲ ನಂಬುತ್ತಿರಲ್ಲ. ನಮ್ಮ ಸಾಹೇಬರು ಸತ್ಯದ ತಲೆ ಮೇಲೆ ಹೊಡೆದ ಹಾಗೆ ಹೇಳ್ತಾರೆ ಕಥೆನಾ. ಸುಮ್ನೇನಾ ಎರಡು ಬಾರಿ ಮಂತ್ರಿ ಆಗೋದು. ಅವರ ಹತ್ತಿರ ಸಂದರ್ಭಕ್ಕೆ ಒಂದು ಕಥೆ ಇರುತ್ತೆ. ಅದನ್ನ ಯಾರ ಹತ್ತಿರ ಹೇಗೆ ಉಪಯೋಗಿಸಬೇಕು